Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

भाग IX — अनुभाग 1
PART IX — SECTION 1
ಭಾಗ IX — ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.


सं-1 नई दिल्ली सोमवार, जनवरी 20, 1992 — पुष्य 30, 1913 (शक) — खन्ड-13
ಸಂಖ್ಯೆ ೧ ನವದೆಹಲಿ ಸೋಮವಾರ, ಜನವರಿ ೨೦, ೧೯೯೨ — ಪುಷ್ಯ ೩೦, ೧೯೧೩ (ಶಕ) — ಸಂಪುಟ ೧೩
No. 1 New Delhi Monday, January 20, 1992 — Pushya 30, 1913 (Saka) — Vol. 13


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely— (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ ([illegible])ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs
(Legislative Department)
New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹನ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಸ್ತ್ರೀಯರ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs
(Legislative Department)
New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) ಅಂತರ್‌ರಾಜ್ಯ ಜಲವಿವಾದ ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ ಅಧಿನಿಯಮ, 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕಂದಾಯ ವಸೂಲಿ ಅಧಿನಿಯಮ, 1890

## (1890ರ ಅಧಿನಿಯಮ ಸಂಖ್ಯೆ 1)

[1890ರ ಫೆಬ್ರವರಿ 14]

ಕೆಲವು ಸರ್ಕಾರಿ ತಗಾದೆಗಳ ವಸೂಲಿಯ ಬಗ್ಗೆ ಉತ್ತಮ ಉಪಬಂಧ ಕಲ್ಪಿಸುವ ಅಧಿನಿಯಮ.

ಕೆಲವು ಸರ್ಕಾರಿ ತಗಾದೆಗಳ ವಸೂಲಿಯ ಬಗ್ಗೆ ಉತ್ತಮ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ, ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:—

1. ಹೆಸರು ಮತ್ತು ವ್ಯಾಪ್ತಿ :— ಈ ಅಧಿನಿಯಮವನ್ನು ಕಂದಾಯ ವಸೂಲಿ ಅಧಿನಿಯಮ, 1890 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. ಪರಿಭಾಷೆಗಳು: — ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ಯಾವುದೂ ವಿರೋಧವಾಗಿರದಿದ್ದರೆ,—

(1) "ಜಿಲ್ಲೆ" ಎಂಬುದು ಪ್ರೆಸಿಡೆನ್ಸಿ ಪಟ್ಟಣವನ್ನು ಒಳಗೊಳ್ಳುತ್ತದೆ;

(2) "ಕಲೆಕ್ಟರ್" ಎಂದರೆ, ಯಾವುದೊಂದು ಜಿಲ್ಲೆಯ ಭೂ ಕಂದಾಯ ಆಡಳಿತದ ಪ್ರಭಾರದಲ್ಲಿರುವ ಮುಖ್ಯಾಧಿಕಾರಿ; ಮತ್ತು

(3) "ತಪ್ಪಿದವ" ಎಂದರೆ, ಯಾವ ವ್ಯಕ್ತಿಯಿಂದ ಭೂ ಕಂದಾಯದ ಬಾಕಿ ಅಥವಾ ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡಬಹುದಾದ ಮೊತ್ತವು ಬರಬೇಕಾಗಿದೆಯೋ ಆ ಯಾವನೇ ವ್ಯಕ್ತಿ ಮತ್ತು ಇದರಲ್ಲಿ ಅಂಥ ಯಾವುದೇ ಬಾಕಿ ಅಥವಾ ಮೊತ್ತವನ್ನು ಸಂದಾಯ ಮಾಡುವ ಬಗ್ಗೆ ಜಾಮೀನುದಾರನಾಗಿ ಜವಾಬ್ದಾರನಾಗಿರುವ ಯಾವನೇ ವ್ಯಕ್ತಿಯೂ ಸೇರುತ್ತಾನೆ.

3. **ಸರ್ಕಾರಿ ತಗಾದೆಗಳು ಸಂದೇಯವಿರುವ ಜಿಲ್ಲೆಗಳನ್ನುಳಿದು ಇತರ ಜಿಲ್ಲೆಗಳಲ್ಲಿ ಆದೇಶಿಕೆಯನ್ನು ಜಾರಿಗೊಳಿಸುವ ಮೂಲಕ ಸರ್ಕಾರಿ ತಗಾದೆಗಳ ವಸೂಲಿ:**— (1) ಬಾಕಿಯು ಒದಗಿಬರುವ ಅಥವಾ ಮೊಬಲಗು ಸಂದೇಯವಿರುವ ಯಾವುದೇ ಜಿಲ್ಲೆಯನ್ನುಳಿದು ಇತರ ಯಾವುದೇ ಜಿಲ್ಲೆಯಲ್ಲಿ ಇರುವ ಅಥವಾ ಸ್ವತ್ತನ್ನು ಹೊಂದಿರುವ ತಪ್ಪಿದವನು ಯಾವುದೇ ಭೂ ಕಂದಾಯದ ಬಾಕಿಯನ್ನು ಅಥವಾ ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡಬಹುದಾದ ಮೊತ್ತವನ್ನು ಕಲೆಕ್ಟರನಿಗೆ ಸಂದಾಯ ಮಾಡಬೇಕಾಗಿರುವಲ್ಲಿ, ಕಲೆಕ್ಟರನು ಆ ಬೇರೆ ಜಿಲ್ಲೆಯ ಕಲೆಕ್ಟರನಿಗೆ—

(ಕ) ತಪ್ಪಿದವನ ಹೆಸರು ಮತ್ತು ಅವನ ಗುರುತಿನ ಬಗ್ಗೆ ಅವಶ್ಯವಿರಬಹುದಾದಂಥ ಇತರ ವಿವರಗಳನ್ನು; ಮತ್ತು

(ಖ) ಅವನು ಸಂದಾಯಮಾಡಬೇಕಾಗಿರುವ ಮೊಬಲಗು ಮತ್ತು ಯಾವ ಬಾಬ್ತಿನ ಬಗ್ಗೆ ಅದು ಬರಬೇಕಾಗಿದೆ ಎಂಬುದನ್ನು—ವಿವರಿಸುವ ಸಾಧ್ಯವಾದಷ್ಟು ಮಟ್ಟಿಗೆ, ಅನುಸೂಚಿಯ ಪ್ರಪತ್ರವನ್ನು ಹೋಲುವ ಒಂದು ಪ್ರಮಾಣ ಪತ್ರವನ್ನು ಕಳುಹಿಸಬಹುದು.

(2) ಪ್ರಮಾಣ ಪತ್ರಕ್ಕೆ ಅದನ್ನು ಕೊಟ್ಟ ಕಲೆಕ್ಟರನು ಅಥವಾ ಅಂಥ ಕಲೆಕ್ಟರನ್ನು ಲಿಖಿತ ಆದೇಶದ ಮೂಲಕ, ಈ ಕರ್ತವ್ಯವನ್ನು ವಹಿಸಿಕೊಡಬಹುದಾದಂಥ ಇತರ ಯಾವನೇ ಅಧಿಕಾರಿಯು ರುಜು ಮಾಡತಕ್ಕದ್ದು ಮತ್ತು ಈ ಅಧಿನಿಯಮವು ಅನ್ಯಥಾ ಉಪಬಂಧಿಸಿರುವುದನ್ನುಳಿದು ಅದರಲ್ಲಿ ವಿವರಿಸಲಾದ ವಿಷಯಗಳ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದ್ದು.

(3) ಆ ಇತರ ಜಿಲ್ಲೆಯ ಕಲೆಕ್ಟರನು ಪ್ರಮಾಣ ಪತ್ರವು ತನಗೆ ತಲುಪಿದ ಅನಂತರ ಅದರಲ್ಲಿ ಕಾಣಿಸಿದ ಮೊಬಲಗನ್ನು, ತನ್ನ ಜಿಲ್ಲೆಯಲ್ಲಿಯೇ ಒದಗಿಬಂದ ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡಲು ಉಪಕ್ರಮಿಸತಕ್ಕದ್ದು.

4. **ಹಿಂದಿನ ಪ್ರಕರಣಗಳಲ್ಲಿ ಕೊನೆಯದರ ಮೇರೆಗೆ ವಸೂಲ್ಮಾಡಿದ ಮೊಬಲಗನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು ನಿರಾಕರಿಸುವ ವ್ಯಕ್ತಿಗೆ ದೊರಕುವ ಪರಿಹಾರ:**— (1) ಪ್ರಮಾಣ ಪತ್ರದಲ್ಲಿ ಕಾಣಿಸಿದ ಮೊಬಲಗಿನ ವಸೂಲಿಗಾಗಿ ಹಿಂದಿನ ಪ್ರಕರಣಗಳಲ್ಲಿ ಕೊನೆಯದರ ಮೇರೆಗೆ ಒಬ್ಬ ವ್ಯಕ್ತಿಯ ವಿರುದ್ಧ ವ್ಯವಹರಣೆಗಳನ್ನು ನಡೆಸಿದಾಗ ಆ ವ್ಯಕ್ತಿಯು ಆ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡುವ ತನ್ನ ಹೊಣೆಗಾರಿಕೆಯನ್ನು ನಿರಾಕರಿಸಿದರೆ ಮತ್ತು ಸಂದಾಯ ಮಾಡುವ ಸಮಯದಲ್ಲಿ, ತಾನು ಅಥವಾ ತನ್ನ ಅಭಿಕರ್ತನು ಸಹಿ ಮಾಡಿದ ಲಿಖಿತದ ಮೂಲಕ ಪ್ರತಿಭಟಿಸಿ ಅದನ್ನು ಸಂದಾಯ ಮಾಡಿದಲ್ಲಿ, ಹಾಗೆ ಸಂದಾಯ ಮಾಡಿದ ಮೊಬಲಗಿನ ಅಥವಾ ಅದರ ಭಾಗದ ಮರು ಸಂದಾಯದ ಬಗ್ಗೆ ದಾವೆ ಹೂಡಬಹುದು.

(2) (1)ನೆಯ ಉಪಪ್ರಕರಣದ ಮೇರೆಗಿನ ಯಾವುದೇ ದಾವೆಯನ್ನು ಪ್ರಮಾಣ ಪತ್ರ ನೀಡಿದ ಕಲೆಕ್ಟರನ ಕಚೇರಿಯು ಯಾವ ಸ್ಥಳೀಯ ಪ್ರದೇಶದಲ್ಲಿರುವುದೋ ಆ ಸ್ಥಳೀಯ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ಹೂಡತಕ್ಕದ್ದು, ಮತ್ತು ದಾವೆಯನ್ನು ಯಾವ ಸ್ಥಳದಲ್ಲಿ ಬಾಕಿಯು ಒದಗಿಬಂತೋ ಅಥವಾ ಮೊಬಲಗಿನ ಸಂದಾಯದ ಬಗ್ಗೆ ಹೊಣೆಗಾರಿಕೆಯು ಉದ್ಭವಿಸಿತೋ ಆ ಸ್ಥಳದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ ನಿರ್ಧರಿಸತಕ್ಕದ್ದು.

(3) ಹಿಂದಿನ ಪ್ರಕರಣಗಳಲ್ಲಿ ಕೊನೆಯಂದರಲ್ಲಿ ಏನೇ ಇದ್ದರೂ, ಹಿಂದೆ ಹೇಳಿದ ಸ್ಥಳದಲ್ಲಿ ಜಾರಿಯಲ್ಲಿರುವ ಕಾನೂನಿಗೊಳಪಟ್ಟು, ಪ್ರಮಾಣ ಪತ್ರದಲ್ಲಿ ವಿವರಿಸಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ವಾದಿಯು ದಾವೆಯಲ್ಲಿ ಸಾಕ್ಷ್ಯ ಕೊಡಬಹುದು.

(4) ಪಾಕಿಸ್ತಾನ ಅಥವಾ ಬರ್ಮಾ ಕಾನೂನಿನ ಭಾಗವಾಗಿ ಜಾರಿಯಲ್ಲಿದ್ದಂತೆ ಈ ಅಧಿನಿಯಮದ ಮೇರೆಗೆ, ಅಥವಾ ಪಾಕಿಸ್ತಾನ ಅಥವಾ ಬರ್ಮಾ ಕಾನೂನಿನ ಭಾಗವಾಗಿರುವ ಯಾವುದೇ ಇತರ ಅಂಥವೇ ಅಧಿನಿಯಮದ ಮೇರೆಗೆ ಈ ಅಧಿನಿಯಮವು ವ್ಯಾಪ್ತವಾಗುವ ಯಾವುದೇ ರಾಜ್ಯದಲ್ಲಿಯ ಕಲೆಕ್ಟರನು ಕೊಟ್ಟ ಪ್ರಮಾಣಪತ್ರದಲ್ಲಿ ಕಾಣಿಸಿದ ಮೊಬಲಗಿನ ವಸೂಲಿಯ ಬಗ್ಗೆ, ಸಂದರ್ಭಾನುಸಾರ, ಪಾಕಿಸ್ತಾನದಲ್ಲಿ ಅಥವಾ ಬರ್ಮಾದಲ್ಲಿರುವ ಯಾವನೇ ವ್ಯಕ್ತಿಯ ವಿರುದ್ಧ ವ್ಯವಹರಣೆಗಳನ್ನು ನಡೆಸಲಾದರೆ, ಈ ಪ್ರಕರಣವು ಅನ್ವಯಿಸತಕ್ಕದ್ದು.

**5. ಇತರ ಸರ್ಕಾರಿ ಅಧಿಕಾರಿಗಳಿಂದ ಅಥವಾ ಸ್ಥಳೀಯ ಪ್ರಾಧಿಕಾರಿಗಳಿಂದ ಕಂದಾಯದ ಬಾಕಿಗಳಂತೆ ವಸೂಲಾಗಬೇಕಾದ ಮೊಬಲಗನ್ನು ಕಲೆಕ್ಟರನು ವಸೂಲ್ಮಾಡುವುದು:**— ಕಲೆಕ್ಟರನಲ್ಲದ ಯಾವನೇ ಸರ್ಕಾರಿ ಅಧಿಕಾರಿಯಿಂದ ಅಥವಾ ಯಾವನೇ ಸ್ಥಳೀಯ ಪ್ರಾಧಿಕಾರಿಯಿಂದ ಭೂಕಂದಾಯದ ಬಾಕಿಯಂತೆ ಯಾವುದೇ ಮೊಬಲಗನ್ನು ವಸೂಲ್ಮಾಡಬೇಕಾಗಿರುವಲ್ಲಿ, ಆ ಅಧಿಕಾರಿಯ ಅಥವಾ ಪ್ರಾಧಿಕಾರಿಯ ಕಚೇರಿಯು ಯಾವ ಜಿಲ್ಲೆಯಲ್ಲಿರುವುದೋ ಆ ಜಿಲ್ಲೆಯ ಕಲೆಕ್ಟರನು, ಆ ಅಧಿಕಾರಿಯ ಅಥವಾ ಪ್ರಾಧಿಕಾರಿಯ ವಿನಂತಿಯ ಮೇರೆಗೆ, ತನ್ನ ಜಿಲ್ಲೆಯಲ್ಲಿಯೇ ಭೂ ಕಂದಾಯದ ಬಾಕಿಯು ಒದಗಿದ್ದರೆ ಹೇಗೋ ಹಾಗೆ, ಆ ಮೊಬಲಗನ್ನು ವಸೂಲ್ಮಾಡಲು ಉಪಕ್ರಮಿಸತಕ್ಕದ್ದು, ಮತ್ತು ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ವಸೂಲ್ಮಾಡತಕ್ಕ ಮೊಬಲಗಿನ ಬಗ್ಗೆ ಬೇರೊಂದು ಜಿಲ್ಲೆಯ ಕಲೆಕ್ಟರನಿಗೆ, ಮೊಬಲಗು ತನಗೆ ಸಂದೇಯವಿದ್ದರೆ ಹೇಗೋ ಹಾಗೆ, ಒಂದು ಪ್ರಮಾಣ ಪತ್ರವನ್ನು ಕಳುಹಿಸಬಹುದು.

**6. (1) ಈ ಅಧಿನಿಯಮದ ಮೇರೆಗೆ ಮಾರಾಟಕ್ಕೆ ಗುರಿಯಾಗುವ ಸ್ವತ್ತು** :—(1) ಈ ಅಧಿನಿಯಮದ ಮೇರೆಗೆ ಒಂದು ಜಿಲ್ಲೆಯ ಕಲೆಕ್ಟರನಿಗೆ ಪ್ರಮಾಣ ಪತ್ರವು ತಲುಪಿದಾಗ ಅವನು, ತಪ್ಪಿದವನಿಗೆ ಸೇರಿದ ಆ ಜಿಲ್ಲೆಯಲ್ಲಿರುವ ಯಾವುದೇ ಸ್ಥಿರ ಸ್ವತ್ತನ್ನು ವರ್ಗಾಯಿಸುವುದನ್ನು ಅಥವಾ ಪ್ರಭಾರಗೊಳಿಸುವುದನ್ನು ನಿಷೇಧಿಸುವ ಒಂದು ಉದ್ಘೋಷಣೆಯನ್ನು ಹೊರಡಿಸಬಹುದು.

(2) ಕಲೆಕ್ಟರನು ಯಾವುದೇ ಕಾಲದಲ್ಲಿ, ಲಿಖಿತ ಆದೇಶದ ಮೂಲಕ ಉದ್ಘೋಷಣೆಯನ್ನು ಹಿಂತೆಗೆದುಕೊಳ್ಳಬಹುದು ಮತ್ತು ಪ್ರಮಾಣ ಪತ್ರದಲ್ಲಿ ಕಾಣಿಸಿದ ಮೊಬಲಗು ವಸೂಲಾದಾಗ ಅಥವಾ ಆ ಮೊಬಲಗನ್ನು ವಸೂಲ್ಮಾಡುವ ಬಗ್ಗೆ ಆ ಸ್ವತ್ತನ್ನು ಮಾರಾಟ ಮಾಡಿದಾಗ ಅದನ್ನು ಹಿಂತೆಗೆದುಕೊಂಡಂತೆ ಭಾವಿಸತಕ್ಕದ್ದು.

(3) ಉದ್ಘೋಷಣೆ ಹೊರಡಿಸಿದ ತರುವಾಯ ಮತ್ತು ಅದನ್ನು ಹಿಂತೆಗೆದುಕೊಳ್ಳುವುದಕ್ಕೆ ಮುಂಚೆ ಮಾಡಲಾದ ಮಾರಾಟ, ದಾನ, ಅಡಮಾನ ಅಥವಾ ಬೇರೆ ರೀತಿಯಲ್ಲಿ ತಪ್ಪಿದವನ ಸ್ವತ್ತಿನ ಅಥವಾ ಅದರಲ್ಲಿರುವ ಅವನ ಹಿತಾಸಕ್ತಿಯ ಯಾವುದೇ ಖಾಸಗಿ ಪರಭಾರೆಯು, ಸರಕಾರದ ವಿರುದ್ಧ ಮತ್ತು ಪ್ರಮಾಣ ಪತ್ರದಲ್ಲಿ ಕಾಣಿಸಿದ ಮೊಬಲಗನ್ನು ವಸೂಲ್ಮಾಡುವ ಬಗ್ಗೆ ನಡೆಸಿದ ಮಾರಾಟದಲ್ಲಿ ಆ ಸ್ವತ್ತನ್ನು ಕೊಂಡುಕೊಂಡ ಯಾವನೇ ವ್ಯಕ್ತಿಯ ವಿರುದ್ಧ ಶೂನ್ಯವಾಗಿರತಕ್ಕದ್ದು.

(4) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಿಗೊಳಪಟ್ಟು, ಯಾವುದೇ ಪ್ರಮಾಣ ಪತ್ರದಲ್ಲಿ ಕಾಣಿಸಿದ ಮೊಬಲಗಿನ ವಸೂಲಿಗಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಸ್ಥಿರ ಸ್ವತ್ತಿನ ವಿರುದ್ಧ ವ್ಯವಹರಣೆಗಳನ್ನು ನಡೆಸಿದಾಗ, ಅದರಲ್ಲಿರುವ ತಪ್ಪಿದವನ ಹಿತಾಸಕ್ತಿಗಳ ವಿರುದ್ಧವಾಗಿ ಮಾತ್ರವೇ ವ್ಯವಹರಣೆಗಳನ್ನು ನಡೆಸತಕ್ಕದ್ದು ಮತ್ತು ಅವನು ಸದ್ಭಾವನೆಯಿಂದ ಸೃಜಿಸಿದ ಯಾವ ಋಣ ಭಾರಗಳು, ಮಾಡಿದ ಅನುದಾನಗಳು ಅಥವಾ ಮಾಡಿಕೊಂಡ ಕರಾರುಗಳು, ಆ ಹಿತಾಸಕ್ತಿಗಳ ವಿರುದ್ಧ ಕೈಕೊಂಡ ವ್ಯವಹರಣೆಗಳ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(5) ಈ ಪ್ರಕರಣದ ಮೇರೆಗಿನ ಒಂದು ಉದ್ಘೋಷಣೆಯನ್ನು ಡಂಗುರ ಹೊಡೆಸುವ ಅಥವಾ ಇತರ ವಾಡಿಕೆಯ ವಿಧಾನದ ಮೂಲಕ ಮತ್ತು ಅದರ ಒಂದು ಪ್ರತಿಯನ್ನು, ಅದು ಸಂಬಂಧಿಸುವ ಸ್ವತ್ತಿನಲ್ಲಿ ಅಥವಾ ಅದರ ಸಮೀಪದಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ, ಮಾಡತಕ್ಕದ್ದು.

**7. ಕಂದಾಯಕ್ಕೆ ಸಂಬಂಧಿಸಿದ ಸ್ಥಳೀಯ ಕಾನೂನುಗಳ ಉಳಿಸುವಿಕೆ:**—ಹಿಂದೆ ಹೇಳಿದ ಪ್ರಕರಣಗಳಲ್ಲಿರುವುದು ಯಾವುದೂ,—

(ಕ) ಭೂ ಕಂದಾಯದ ವಸೂಲಿಯ ಬಗ್ಗೆ ಅಥವಾ ಭೂಕಂದಾಯದ ಬಾಕಿಗಳಂತೆ ವಸೂಲ್ಮಾಡಬೇಕಾದ ಮೊಬಲಗಿನ ಬಗ್ಗೆ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮದ ಮೂಲಕ ಉಪಬಂಧಿಸಿದ ಭದ್ರತೆಯನ್ನು ದುರ್ಬಲಗೊಳಿಸುವುದೆಂದು ಅಥವಾ ಅದರ ಯಾವುದೇ ಉಪಬಂಧಗಳ ಮೇಲೆ ಪ್ರಭಾವ ಬೀರುವುದೆಂದು, ಅಥವಾ

(ಖ) ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ಅಧಿನಿಯಮದ ಮೇರೆಗೆ ನಿಗಮ, ಕಮೀಷನರ್, ಸಮಿತಿ, ಮಂಡಲಿ, ಪರಿಷತ್ತು ಅಥವಾ ಪುರಸಭೆಯ ಮೇಲೆ ಅಧಿಕಾರವಿರುವ ಯಾವನೇ ವ್ಯಕ್ತಿಗೆ ಸಂದಾಯ ಮಾಡಬೇಕಾದ ಯಾವುದೇ ಕರ ವಸೂಲಿಯ ಬಗ್ಗೆ, ಯಾವನೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅಧಿಕಾರ ಕೊಡುವುದೆಂದು ಅರ್ಥ ಮಾಡತಕ್ಕದ್ದಲ್ಲ.

**8. ಭಾರತದಲ್ಲಿ, ಭಾರತದಾಚೆ ಉದ್ಭವಿಸುವ ಕೆಲವೊಂದು ಸರ್ಕಾರಿ ತಗಾದೆಗಳ ವಸೂಲಿ:**—ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟಿರುವ ಆದರೆ ಭಾರತದ ಭಾಗವಾಗಿರದ ಯಾವುದೇ ಸ್ಥಳೀಯ ಪ್ರದೇಶಕ್ಕೆ ಈ ಅಧಿನಿಯಮವು ಅನ್ವಯಿಸುವಾಗ, ಆ ಸ್ಥಳೀಯ ಪ್ರದೇಶದಲ್ಲಿ ಒದಗಿಬಂದ ಭೂ ಕಂದಾಯದ ಬಾಕಿಯನ್ನು ಅಥವಾ ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡಬಹುದಾದ ಮತ್ತು ಕಲೆಕ್ಟರನಿಗೆ ಅಥವಾ ಇತರ ಸರ್ಕಾರಿ ಅಧಿಕಾರಿಗೆ ಅಥವಾ ಆ ಸ್ಥಳೀಯ ಪ್ರದೇಶದಲ್ಲಿಯ ಒಬ್ಬ ಸ್ಥಳೀಯ ಪ್ರಾಧಿಕಾರಿಗೆ ಸಂದಾಯವಾಗಬೇಕಾದ ಮೊಬಲಗನ್ನು ಈ ಅಧಿನಿಯಮದ ಮೇರೆಗೆ ಭಾರತದಲ್ಲಿಯೇ ವಸೂಲ್ಮಾಡಬಹುದು.

9. ಬರ್ಮಾದಲ್ಲಿ ಒದಗಿಬರುವ ಭೂ ಕಂದಾಯ ಇತ್ಯಾದಿಗಳನ್ನು ಭಾರತದಲ್ಲಿ ವಸೂಲ್ಮಾಡುವುದು: —(1) ಕೇಂದ್ರ ಸರ್ಕಾರವು, ಬರ್ಮಾದಲ್ಲಿ ಒದಗಿಬರುವ ಭೂ ಕಂದಾಯದ ಬಾಕಿಯನ್ನು ಅಥವಾ ಭೂ ಕಂದಾಯದ ಬಾಕಿಯಂತೆ ಬರ್ಮಾದಲ್ಲಿ ವಸೂಲ್ಮಾಡಬಹುದಾದ ಮತ್ತು ಬರ್ಮಾದಲ್ಲಿಯ ಒಬ್ಬ ಕಲೆಕ್ಟರನಿಗೆ ಅಥವಾ ಇತರ ಸರ್ಕಾರಿ ಅಧಿಕಾರಿಗೆ ಅಥವಾ ಸ್ಥಳೀಯ ಪ್ರಾಧಿಕಾರಿಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಈ ಅಧಿನಿಯಮದ ಮೇರೆಗೆ ಭಾರತದಲ್ಲಿಯೇ ವಸೂಲ್ಮಾಡಬಹುದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಅಂಥ ಬಾಕಿಯು ಅಥವಾ ಮೊಬಲಗು ಹಾಗೆ ವಸೂಲೀಯವಾಗತಕ್ಕದ್ದು:

ಪರಂತು, ಭಾರತದಲ್ಲಿ ಒದಗಿಬರುವ ಬಾಕಿಯನ್ನು ಭಾರತದಲ್ಲಿ ಪ್ರತಿಭಟಿಸಿ ಸಲ್ಲಿಸುವ ಒಬ್ಬ ವ್ಯಕ್ತಿಗೆ ಈ ಅಧಿನಿಯಮದ 4ನೆಯ ಪ್ರಕರಣದ ಮೇರೆಗೆ ದೊರೆಯುವ ಪರಿಹಾರವು, ಬರ್ಮಾದಲ್ಲಿ ಒದಗಿಬರುವ ಬಾಕಿಯನ್ನು ಭಾರತದಲ್ಲಿ ಪ್ರತಿಭಟಿಸಿ ಸಲ್ಲಿಸುವ ಒಬ್ಬ ವ್ಯಕ್ತಿಗೆ ಬರ್ಮಾ ಕಾನೂನಿನ ಮೇರೆಗೆ ಬರ್ಮಾದಲ್ಲಿ ದೊರೆಯುವುದೆಂದು ತನಗೆ ಮನದಟ್ಟಾದ ಹೊರತು, ಕೇಂದ್ರ ಸರ್ಕಾರವು ಅಂಥ ಯಾವುದೇ ನಿರ್ದೇಶವನ್ನು ನೀಡತಕ್ಕದ್ದಲ್ಲ.

(2) ಬರ್ಮಾದಲ್ಲಿ ಜಾರಿಯಲ್ಲಿರುವ ವರಮಾನ ತೆರಿಗೆ ಅಥವಾ ಅಧಿಕರಕ್ಕೆ ಸಂಬಂಧಿಸಿದ ಅಧಿನಿಯಮಗಳ ಮೇರೆಗೆ ಬರಬೇಕಾದ ತೆರಿಗೆ ಅಥವಾ ದಂಡದ ಯಾವುದೇ ಬಾಕಿಗಳನ್ನು ಈ ಪ್ರಕರಣದ ಕಾರಣದಿಂದ ವಸೂಲ್ಮಾಡುವ ಬಗ್ಗೆ, ಕಲೆಕ್ಟರನು, ತಾನು 1922ರ ವರಮಾನ ತೆರಿಗೆ ಅಧಿನಿಯಮದ (1922ರ 11) 46 (2)ನೆಯ ಪ್ರಕರಣದ ಪರಂತುಕದ ಮೇರೆಗಿನ ಭಾರತೀಯ ವರಮಾನ ತೆರಿಗೆ ಮತ್ತು ಅಧಿಕರದ ಸಂಬಂಧದಲ್ಲಿ ಹೊಂದಿರುವಂಥ ಹೆಚ್ಚಿನ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) (1)ಮತ್ತು (2)ನೆಯ ಉಪ ಪ್ರಕರಣಗಳು, ಬರ್ಮಾಕ್ಕೆ ಅವು ಅನ್ವಯಿಸುವಂತೆ, ಪಾಕಿಸ್ತಾನಕ್ಕೂ ಅನ್ವಯಿಸತಕ್ಕದ್ದು.

10. ಕೆಲವು ಸಂದರ್ಭಗಳಲ್ಲಿ ವಸೂಲಾದ ಹಣವನ್ನು ಪಾವತಿ ಮಾಡಲು ಕಲೆಕ್ಟರುಗಳ ಕರ್ತವ್ಯ: — ಬೇರೊಂದು ರಾಜ್ಯದ ಕಲೆಕ್ಟರನಿಂದ ಅಥವಾ ಪಾಕಿಸ್ತಾನ ಅಥವಾ ಬರ್ಮಾದಲ್ಲಿಯ ಕಲೆಕ್ಟರನಿಂದ ಈ ಅಧಿನಿಯಮದ ಮೇರೆಗಿನ ಒಂದು ಪ್ರಮಾಣಪತ್ರವು ಕಲೆಕ್ಟರನಿಗೆ ತಲುಪಿದಲ್ಲಿ, ಅವನು ಆ ಪ್ರಮಾಣ ಪತ್ರದ ಆಧಾರದ ಮೇಲೆ ವಸೂಲ್ಮಾಡಿದ ಯಾವುದೇ ಮೊಬಲಗನ್ನು ಆ ವಿಷಯದಲ್ಲಿ ತಗುಲಿದ ತನ್ನ ವೆಚ್ಚಗಳನ್ನು ಕಳೆದು, ಆ ಕಲೆಕ್ಟರನಿಗೆ ಪಾವತಿ ಮಾಡತಕ್ಕದ್ದು.

## ಅನುಸೂಚಿ

### ಪ್ರಮಾಣ ಪತ್ರ

(3ನೆಯ ಪ್ರಕರಣದ (1)ನೆಯ ಉಪ ಪ್ರಕರಣವನ್ನು ನೋಡಿ

______ ಕಲೆಕ್ಟರನಿಂದ

______ ಕಲೆಕ್ಟರನಿಗೆ

ದಿನಾಂಕ ______ 19

______ ರೂಪಾಯಿಗಳ ಮೊಬಲಗು ______ ವಾಸಿಗಳಾದ ಮತ್ತು ______ ರವರ ಮಗನಾದ ______ ರಿಂದ ______ ನಿಮಿತ್ತ ಸಂದಾಯವಾಗಬೇಕಾಗಿದೆ; ಇವರು ನಿಮ್ಮ ಜಿಲ್ಲೆಯಲ್ಲಿ( ______ ಯಲ್ಲಿದ್ದಾರೆಂದು) ( ______ ಯಲ್ಲಿ ಸ್ವತ್ತುಳ್ಳವರೆಂದು) ನಂಬಲಾಗಿದೆ.

1890ನೇ ಇಸವಿಯ ಕಂದಾಯ ವಸೂಲಿ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸದರಿ ಮೊಬಲಗು, ಅದು ನಿಮ್ಮ ಜಿಲ್ಲೆಯಲ್ಲಿಯೇ ಒದಗಿಬಂದ ಭೂ ಕಂದಾಯದ ಬಾಕಿಯಾಗಿರುತ್ತಿದ್ದರೆ ಹೇಗೋ ಹಾಗೆ ನಿಮ್ಮಿಂದ ವಸೂಲಾಗಬೇಕಾಗಿರುತ್ತದೆ ಮತ್ತು ನೀವು ಅದನ್ನು ಹಾಗೆ ವಸೂಲು ಮಾಡಿ ______ ಯಲ್ಲಿ ಇರುವ ನನ್ನ ಕಚೇರಿಗೆ ಪಾವತಿ ಮಾಡಬೇಕೆಂದು ಈ ಮೂಲಕ ಕೋರಲಾಗಿದೆ.

ಕ.ಖ.,

______ ಯ ಕಲೆಕ್ಟರ್

x x

ಮೇಲ್ಕಂಡ ಕಂದಾಯ ವಸೂಲಿ ಅಧಿನಿಯಮ, 1890 (1890ರ 1)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ನವದೆಹಲಿ
ದಿನಾಂಕ:

ಕಾರ್ಯದರ್ಶಿ,
ಭಾರತ ಸರ್ಕಾರ.

The above translation in Kannada of The Revenue Recovery Act, 1890 (1 of 1890) has been authorised by the President to be published in the Official Gazette under clause (a) of Section 2 of the Authoritative Texts (Central Laws) Act, 1973.

New Delhi
Date:

V.S. RAMADEVI,
Secretary to the Govt. of India